ಕರ್ನಾಟಕ ವಿಧಾನಸಭೆ

KARNATAKA LEGISLATIVE ASSEMBLY

Thursday, 25th April 1974/Vaishaka 5, 1896 S.E.

The House met in the Assembly Chamber, Vidhana Soudha, at One of the Clock.

Madam SPEAKER (Smt. K. S. Nagarathnamma) in the Chair.

STARRED QUESTIONS

(to which oral answers were given)

MUKESH SUGAR FACTORY AT HARIGE

464. Sri H. B. KADASIDDAPPA (Honnalli).—

Will the Minister for Industries and Parliamentary Affairs be pleased to state:—

(*a*) the date on which the Mukesh Sugar Factory at Harige, Shimoga Taluk was started;

(*b*) the extent of land given to this factory by the Government and the amount of rent fixed for the land whether the rent has been fully paid;

(*c*) the number of employees working in the factory and the community to which they belong;

(*d*) the total quantity of the sugar produced each year from the beginning; whether there is any decrease in production of sugar; if so, the percentage of decrease and the reason for the same;

(*e*) the purchase price of sugarcane each year from the beginning and who fixes the price;

(*f*) who are the persons concerned to measure the recovery of sugar and how the recovery is fixed?

Sri S. M. KRISHNA (Minister for Industries and Parliamentary Affairs).—

(*a*) The factory started in 1955. Actual production commenced from 4th January 1958.

(*b*) 1,522 acres and 11 guntas of land leased to the factory for a period of 30 years. Rent has been fixed on a sliding scale. The factory is paying at present a rent of Rs. 100 per acre per annum. Rent has been fully paid including the rent of current year.

(*c*) Communitywise figures are not available.

(*d*) *Vide* Statement-I appended. There was decrease in the production of sugar during 1966-67, 1967-68. This is because of diversion of cane for manufacturing jaggery. The paddy prices were also considerably high and many farmers switched over to paddy cultivation expecting high income.

(*e*) *Vide* Statement-II appended. The minimum cane price payable by each factory every year is fixed by the Government of India. The actual price paid is negotiated with the cane growers sometimes with the help of the State Government.

(*f*) Recovery is calculated on the actual quantity of sugar bagged to the quantity of sugarcane crushed. This is checked and scrutinised by the Central Excise Department and also by the Chemical Examiner of the Government of India.

STATEMENT-I

Total quantity of sugar produced each year.

Season	Sugar bagged	Season	Sugar bagged
1957-58	16,650	1966-67	77,118
1958-59	35,541	1967-68	62,075
1959-60	18,176	1968-69	1,81,801
1960-61	44,819	1969-70	2,32,276
1961-62	67,561	1970-71	2,01,077
1962-63	60,874	1971-72	2,63,821
1963-64	55,444	1972-73	3,19,715
1964-65	1,53,254	1973-74	1,62,338
1965-66	1,44,095	(upto Jan. 1974).	

STATEMENT-II

Quantity of sugar cane purchased each year and the price paid.

Year	Quantity purchased tonnes	Statutory rate fixed Rs./tonne	Rate paid Rs./tonne
1958-59	34,536.910	39.20	39.20
1959-60	18,414.202	44.10	44.10
1960-61	42,522.085	43.40	43.40+Rs. 200
1961-62	66,997.035	43.40	43.40
1962-63	54,138.740	45.00	45.00
1963-64	55,195.945	50.90	50.90
1964-65	1,59,858.275	53.60	53,60
1965-66	1,48,516.155	53.60	53.60
1966-67	68,834.960	58.00	58.00+Rs-5.00
1967-68	53,295.665	81.70	125.35
1968-69	1,83,474.450	85.00	114.60
1969-70	2,38,106.560	79.10	79.10+Rs 3.00
1970-71	1,92 041.210	77.70	77.70
1971-72	2,47,749.225	77.70	100.00
1972-73	3,34,994.160	97.90	117.00
1973-74		89.40	115.00

ಶ್ರೀ ಎಚ್. ಬಿ. ಕಾಡಸಿದ್ದಪ್ಪ.—ಈ ಕಾರ್ಖಾನೆಗೆ ವರ್ಷಕ್ಕೆ 100 ರೂಪಾಯಿ ಪ್ರಕಾರ ಗೇಣಿಗೆ ಕೊಟ್ಟಿದ್ದಾರೆ. ಈಗಿನ ರೇಟಿಗೂ ಇದಕ್ಕೂ ಬಹಳ ವ್ಯತ್ಯಾಸ ಕಾಣುತ್ತದೆ. ಆದ್ದರಿಂದ ಇದನ್ನು ಹೆಚ್ಚು ಮಾಡುವುದಕ್ಕೆ ಏನಾದರೂ ಕ್ರಮ ಸರ್ಕಾರದವರು ತೆಗೆದುಕೊಳ್ಳುತ್ತಾರೆಯೇ ?

†ಶ್ರೀ ಎಸ್. ಎಂ. ಕೃಷ್ಣ.—ಇದು 1955ನೇ ಇಸವಿಗೆ ಮೊದಲು ನಡೆದಿರತಕ್ಕ ವ್ಯವಹಾರ. ಆದುದರಿಂದ ಈಗ ಏನು ಮಾಡಲಕ್ಕೆ ಬರುತ್ತದೆ ಎನ್ನುವುದನ್ನು ಸ್ವಲ್ಪ ಯೋಚನೆ ಮಾಡ ಬೇಕಾಗುತ್ತದೆ.

ಶ್ರೀ ಎಚ್. ಬಿ. ಕಾಡಸಿದ್ದಪ್ಪ.—ಅವರಿಗೆ 1522 ಎಕರೆ ಕೊಡಲಾಗಿದೆ ಎಂದು ಹೇಳಿದ್ದಾರೆ ಅವರು ಬಗರ್ ಹುಕುಂ ಸಾಗುವಳಿ ಮಾಡಿರುವ ವಿಷಯ ಸರ್ಕಾರದವರ ಗಮನಕ್ಕೆ ಬಂದಿದೆಯೇ

ಶ್ರೀ ಎಸ್. ಎಂ. ಕೃಷ್ಣ.—ಸರ್ಕಾರದ ಗಮನಕ್ಕೆ ಬಂದಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಈ ಸಕ್ಕರೆ ಕಾರ್ಖಾನೆಗೆ 1522 ಎಕರೆ 11 ಗುಂಟೆ ಜಮೀನನ್ನು ಗೇಣಿಗೆ ಕೊಟ್ಟಿರುವುದಾಗಿ ಹೇಳಿದ್ದಾರೆ. ಎಷ್ಟೇ ಬಾಡಿಗೆ ನಿಗದಿ ಮಾಡಿದ್ದರೂ ಕೂಡ ಈಗ ಜಾರಿ ಯಲ್ಲಿರುವ ಭೂಸುಧಾರಣಾ ಕಾನೂನು ಪ್ರಕಾರ ಮಿತಿಗೆ ಮೀರಿ ಈ ಭೂಮಿ ಹೋಗುತ್ತದೆ. ಈ ಬಗ್ಗೆ ಸರ್ಕಾರದವರು ಯಾವ ನೀತಿಯನ್ನು ಅನುಸರಿಸುತ್ತಾರೆ ? ಆ ಜಮೀನನ್ನು ಯಾವರೀತಿ ವಿಲೇವಾರಿ ಮಾಡಬೇಕೆನ್ನುವ ಉದ್ದೇಶವನ್ನು ಸರ್ಕಾರದವರು ಇಟ್ಟುಕೊಂಡಿದ್ದಾರೆ ?

ಶ್ರೀ ಎಸ್. ಎಂ. ಕೃಷ್ಣ.—ಭೂಸುಧಾರಣೆ ಕಾನೂನು ಪ್ರಕಾರ ಏನು ಸುಧಾರಣೆ, ಆಗಿದೆ, ಅದಕ್ಕೆ ಇದೂ ಕೂಡ ಒಳಪಡಬೇಕಾಗಿರತಕ್ಕ ವಿಚಾರ. ಭೂ ವಿಹೀನರಿಗೆ ಭೂಮಿಯನ್ನು ಹಂಚಿ ಕೊಡಬೇಕು ಎನ್ನುವ ಸಾರ್ವತ್ರಿಕ ಧೋರಣೆ ಸರ್ಕಾರಕ್ಕೆ ಇದೆ. ಅದರ ಪ್ರಕಾರ ಹಂಚಿ ಕೊಡಲಾಗುತ್ತದೆ.

† Indicates that the remarks or speeches have not been revised by the member concerned.

ಶ್ರೀ ಜಿ. ಪುಟ್ಟಸ್ವಾಮಿ.—ಈ ಕಾರ್ಖಾನೆಯು ಮಾಲೀಕರು 1522 ಎಕರೆಗಿಂತ ಜಾಸ್ತಿ ಎಂದರೆ ಸುಮಾರು 400, 500 ಎಕರೆ ಭೂಮಿಯನ್ನು ಬಗರ್‌ಹುಕುಂ ಸಾಗುವಳಿ ಮಾಡಿದ್ದಾರೆಂದು ತಿಳಿದು ಬರುತ್ತದೆ. ಈ ಬಗ್ಗೆ ವರದಿ ತರಿಸಿಕೊಂಡು ಬಗರ್‌ಹುಕುಂ ಆಗಿರತಕ್ಕ ಜಮೀನನ್ನು ಬಡವರಿಗೆ, ಜಮೀನಿಲ್ಲದವರಿಗೆ ಕೊಡುವುದಕ್ಕೆ ಪ್ರಯತ್ನ ಮಾಡುತ್ತಾರೆಯೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈಗಾಗಲೇ ಈ ಅಧಿವೇಶನದಲ್ಲಿ ಒಂದು ಪ್ರಶ್ನೆಗೆ ಉತ್ತರ ಕೊಡುತ್ತ ಐದು ಎಕರೆ ಮಾತ್ರ ಬಗರ್ ಹುಕುಂ ಸಾಗುವಳಿಯಾಗಿರುವುದಾಗಿ ಸರ್ಕಾರಕ್ಕೆ ಗೊತ್ತಾಗಿರುವುದು ಎಂದು ತಿಳಿಸಿದ್ದೇನೆ.

ಶ್ರೀ ಎಚ್. ಬಿ. ಕಾಡಸಿದ್ದಪ್ಪ.—ಮಹಾರಾಷ್ಟ್ರದವರು ಕಾರ್ಖಾನೆಯನ್ನು ನಡೆಸುತ್ತಿದ್ದು, ಅಲ್ಲಿ ಕೆಲಸ ಮಾಡತಕ್ಕ ನೌಕರವರ್ಗದವರೆಲ್ಲ ಮಹಾರಾಷ್ಟ್ರದವರೇ ಆಗಿದ್ದಾರೆ. ಕರ್ನಾಟಕ ರಾಜ್ಯದವರನ್ನು ಯಾರನ್ನೂ ತೆಗೆದುಕೊಳ್ಳುತ್ತಿಲ್ಲ. ಇದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಬಂದರೆ ಏನು ವ್ಯವಸ್ಥೆ ಮಾಡುತ್ತಾರೆ ? 18 ಪರ್ಸೆಂಟ್ ಪೆಡ್ಯೂರ್ಡ್ ಕ್ಯಾಸ್ಟ್ ಮತ್ತು ಪೆಡ್ಯೂರ್ಡ್ ಟ್ರೈಬ್ಸ್‌ನವರಿಗೆ ಕೊಡಬೇಕೆಂದು ನಿಗದಿಯಾಗಿರುವುದನ್ನು ಈ ಕಾರ್ಖಾನೆಯಲ್ಲಿಯೂ ಕೊಡುವುದಕ್ಕೆ ವ್ಯವಸ್ಥೆ ಮಾಡುತ್ತಾರೆಯೇ ?

ಶ್ರೀ ಎಸ್. ಎಂ. ಕೃಷ್ಣ.—ಇದು ಖಾಸಗಿ ಕಾರ್ಖಾನೆ. ಖಾಸಗಿ ಕಾರ್ಖಾನೆಗಳಲ್ಲಿಯೂ ಕೂಡ ಸ್ಥಳೀಯ ಜನಗಳಿಗೆ ಆದಷ್ಟು ಹೆಚ್ಚಿನ ಪ್ರಮಾಣದಲ್ಲಿ ಉದ್ಯೋಗಾವಕಾಶಗಳನ್ನು ಕಲ್ಪಿಸಿ ಕೊಡಬೇಕು ಎನ್ನುವುದು ಸರ್ಕಾರದ ಧೋರಣೆ. ಈ ಧೋರಣೆಯನ್ನು ಖಾಸಗಿ ಕಾರ್ಖಾನೆಯವರು ಕೂಡ ಅನುಸರಿಸುತ್ತಾರೆ ಎನ್ನುವುದು ನಮ್ಮ ಆಶಯ. ಅದಕ್ಕೆ ಬೇಕಾದ ತಿಳುವಳಿಕೆಯನ್ನು ಈ ಕಾರ್ಖಾನೆಯವರಿಗೂ ಕೊಡುತ್ತಿದ್ದೇವೆ.

ಶ್ರೀ ಕಾಗೋಡು ತಿಮ್ಮಪ್ಪ.—1522 ಎಕರೆ ಜಮೀನನ್ನು ಸಕ್ಕರೆ ಕಾರ್ಖಾನೆಯವರಿಗೆ ಕೊಡತಕ್ಕ ಕಾಲದಲ್ಲಿ ತುಂಗಭದ್ರ ಷುಗರ್ ಫ್ಯಾಕ್ಟರಿ ಎಂದು ಇರಲಿಲ್ಲವೇ ? ಹಾಗಿದ್ದರೆ ಮುಖೇಶ್ ಎನ್ನುವವರಿಗೆ ಈ ಜಮೀನು ಹೇಗೆ ಹೋಯಿತು ? ಅದಕ್ಕೆ ಸರ್ಕಾರದ ಅನುಮತಿಯನ್ನು ಪಡೆದಿದ್ದಾರೆಯೇ ?

ಶ್ರೀ ಎಸ್. ಎಂ. ಕೃಷ್ಣ.—ಅನುಮತಿ ಇಲ್ಲದೆ ಇಷ್ಟು ದೊಡ್ಡ ಪ್ರಮಾಣದಲ್ಲಿ ಜಮೀನು ತೆಗೆದುಕೊಳ್ಳುವುದಕ್ಕೆ ಸಾಧ್ಯವಿಲ್ಲ. ಇವು1955ನೇ ಇಸವಿಗೆ ಮುಂಚೆ ನಡೆದಿರತಕ್ಕ ವಿದ್ಯಮಾನಗಳು. ಆ ಹೊತ್ತಿನ ಪರಿಸ್ಥಿತಿಯ ಪ್ರಕಾರ ಆ ತಾಲ್ಲೂಕಿನಲ್ಲಿ ಕಾರ್ಖಾನೆ ಬರಬೇಕು ಎಂದು ಅದಕ್ಕೆ ಇನ್‌ಸೆಂಟಿವ್ ಆಗಿ ಕೊಟ್ಟಿರಬಹುದು. ನಾನು ಹೇಳತಕ್ಕ ವಿಚಾರವಿಷ್ಟೆ. In view of the Land Reforms Act which has been enacted, this ceases to be relevant.

Sri KAGODU THIMMAPPA.—Originally the land was granted in favour of Thungabhadra Factory. Now this land is being enjoyed by Mukesh Textiles. Now this diversification took place ; whether it took place after obtaining permission from the Government ; if so when ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ನನಗೆ ತಿಳಿದಮಟ್ಟಿಗೆ ಅವರು ಹೆಸರನ್ನು ಬದಲಾಯಿಸಿಕೊಂಡಿದ್ದಾರೆ ಅಷ್ಟೆ. ಹೆಸರನ್ನು ಬದಲಾಯಿಸಿಕೊಂಡಾಗ ಹಿಂದಿನ ಕಂಪೆನಿಗೆ ಕೊಟ್ಟಿದ್ದ ಷರತ್ತುಗಳೇನಿದ್ದುವು ಅದೇ ಷರತ್ತುಗಳು ಅನ್ವಯವಾಗುತ್ತವೆ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಮಾನ್ಯ ಮಂತ್ರಿಗಳು ಇದು ಖಾಸಗಿ ಕಾರ್ಖಾನೆಯಾದುದರಿಂದ ಅಲ್ಲಿ ಗೊತ್ತಾದ ಪ್ರಮಾಣದಲ್ಲಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ವರ್ಗಗಳಿಗೆ ರಿಸರ್ವೇಷನ್ ಮಾಡತಕ್ಕ ನೀತಿ ಇಲ್ಲ ಎನ್ನುವ ರೂಪದಲ್ಲಿ ಹೇಳಿದರು. ಸರಕಾರದ ಬಂಡವಾಳ ಎಲ್ಲೆಲ್ಲಿದೆ ಅಂಥ ಕಾರ್ಖಾನೆಗಳಲ್ಲಿ ಸಾರ್ವಜನಿಕ ಉದ್ದಿಮೆಗಳಲ್ಲಿ ಈ ವಿಧವಾದ ರಿಸರ್ವೇಷನ್ ನಿಯಮಗಳನ್ನು ಪಾಲಿಸಬೇಕೆಂದು ಸರ್ಕಾರ ನುತ್ತೋಲೆಯನ್ನು ಕಳುಹಿಸಿದೆ. ಅದೇ ರೀತಿ ಇಲ್ಲಿಯೂ ಕೂಡ ಪರಿಶಿಷ್ಟ ವರ್ಗ ಮತ್ತು ಪರಿಶಿಷ್ಟ ಜನಾಂಗಗಳಿಗೆ ರಾಜ್ಯಾಂಗದಲ್ಲಿರುವ ಹಕ್ಕುಬಾಧ್ಯತೆಗಳನ್ನು ರಕ್ಷಣೆ ಮಾಡತಕ್ಕ ರೀತಿಯಲ್ಲಿ ಸುತ್ತೋಲೆಯನ್ನು ಕಳುಹಿಸುತ್ತಾರೆಯೇ ಸ್ವಾಮಿ ?

ಶ್ರೀ ಎಸ್. ಎಂ. ಕೃಷ್ಣ.—ನಾನು ಆಗಲೇ ಹೇಳಿದ ಉತ್ತರಕ್ಕೆ ಒಂದು ತಿದ್ದುಪಡಿ, ಇದು 1955ನೇ ಇಸವಿಗೆ ಮುಂಚೆ ಕೊಟ್ಟಿದ್ದಲ್ಲ, 1956ನೇ ಇಸವಿ ಆದ ಮೇಲೆ ಕೊಟ್ಟಿರತಕ್ಕ ಗ್ರಾಂಟ್.

ಮಾನ್ಯ ಜಯಪ್ರಕಾಶ ನಾರಾಯಣ್ ಅವರು ನಾನು ಕೊಟ್ಟ ಉತ್ತರಕ್ಕೆ ತಮ್ಮದೇ ಆದ ರೂಪವನ್ನು ಕೊಡುವುದಕ್ಕೆ ಪ್ರಯತ್ನ ಮಾಡಿದ್ದಾರೆ. ಇದು ಖಾಸಗಿ ಕಾರ್ಖಾನೆ, ಖಾಸಗಿ ಕಾರ್ಖಾನೆಗೆ ರಿಕ್ಯೂಟ್‌ಮೆಂಟ್ ಮಾಡುವ ವಿಚಾರದಲ್ಲಿ ಸರ್ಕಾರಕ್ಕೆ ಯಾವ ವಿಧವಾದ ನೇರ ಹತೋಟಿ ಇಲ್ಲ. ಎಂದು ನಾನು ಹೇಳಿದೆ. ಆದರೂ ನಮ್ಮ ಥೋರಣ್ ಏನಿದೆ ಅದನ್ನು ನಾವು ಖಾಸಗಿ ಕಾರ್ಖಾನೆಯವರಿಗೂ ತಿಳಿಸಿದ್ದೇವೆ, ಸಾರ್ವಜನಿಕ ಉದ್ದಿಮೆಗಳಿಗೂ ತಿಳಿಸಿದ್ದೇವೆ. ಆದುದರಿಂದ ಪ್ರತಿಯೊಂದು ಕಾರ್ಖಾನೆಯೂ ಕೂಡ ನಮ್ಮ ಸಮಾಜದಲ್ಲಿರುವ ದಲಿತವರ್ಗದವರ ಬಗ್ಗೆ ಕೂಡ ಅನುಕಂಪಪಟ್ಟು ಅವರಿಗೆ ಸಾಕಾದಷ್ಟು ಪ್ರಾತಿನಿಧ್ಯವನ್ನು ಕಾರ್ಖಾನೆಗಳಲ್ಲಿ ಕೊಡಬೇಕಾಗಿರ ತಕ್ಕದ್ದು, ಬಹಳ ಅಗತ್ಯ, ಅದು ನೈತಿಕ ಜವಾಬ್ದಾರಿ ಎನ್ನತಕ್ಕದ್ದು ಸರ್ಕಾರದ ದೃಷ್ಟಿ.

ಶ್ರೀ ಕೋಣಂದೂರು ಲಿಂಗಪ್ಪ.—ಸಕ್ಕರೆ ಉತ್ಪಾದನೆ ಕಡಮೆಯಾಗುವುದಕ್ಕೆ ಭತ್ತದ ಬೆಲೆಗಳು ಜಾಸ್ತಿಯಾದುದರಿಂದ ಭತ್ತವನ್ನು ಹೆಚ್ಚು ಬೆಳೆದದ್ದೇ ಕಾರಣ ಎಂದು ಹೇಳಿದ್ದಾರೆ. ಆದರೆ ಅಲ್ಲಿನ ರೈತರ ಕಬ್ಬನ್ನು ಕಾರ್ಖಾನೆಯವರು ತೆಗೆದುಕೊಳ್ಳದೆ ಸತಾಯಿಸಿ ರೈತರು ಹಿರಿಯೂರು ಮತ್ತು ಪಾಂಡವಪುರದವರೆಗೂ ಕಬ್ಬನ್ನು ಮಾರಾಟ ಮಾಡಲಿಕ್ಕೆ ಹೋಗಿರುವುದನ್ನು ರುಜುವಾತು ಮಾಡಿ ಕೊಟ್ಟರೆ ಏನು ಕ್ರಮ ತೆಗೆದುಕೊಳ್ಳುತ್ತಾರೆ ? ಕಾರ್ಖಾನೆಯವರಿಗೆ 1522 ಎಕರೆ ಭೂಮಿಯನ್ನು ಕೊಟ್ಟಿದ್ದರೂ ಅದಕ್ಕೆ ಎರಡರಷ್ಟು ಭೂಮಿ ಅವರ ಕೈಯಲ್ಲಿದೆ. ಅವರು ಅದನ್ನು ಎಕರೆಗೆ ಐದು ಸಾವಿರ ರೂಪಾಯಿಗಳ ಪ್ರಕಾರ ಕಾಗದಪತ್ರವಿಲ್ಲದೆ ಮಾರಾಟ ಮಾಡುತ್ತಿದ್ದಾರೆ. ಅದನ್ನು ಸರ್ಕಾರದ ಗಮನಕ್ಕೆ ತಂದರೆ ಏನು ಕ್ರಮ ತೆಗೆದುಕೊಳ್ಳುತ್ತಾರೆ ?

ಶ್ರೀ ಎಸ್. ಎಂ. ಕೃಷ್ಣ.—ಭೂಸುಧಾರಣೆ ಕಾನೂನು ಜಾರಿಗೆ ಬಂದ ಮೇಲೆ ಅವರು ಏನು ಮಾರಾಟ ಮಾಡಿದ್ದರೂ ಕೂಡ ಅದು ತಾನೇ ತಾನಾಗಿ ರದ್ದಾಗುತ್ತದೆ. ಮಾನ್ಯ ರೆವೆನ್ಯೂ ಸಚಿವರು ಸದನಕ್ಕೆ ತಿಳಿಸಿರುವ ಹಾಗೆ ನಮಗೆ ಬಂದಿರತಕ್ಕ ವರ್ತಮಾನದಂತೆ ಅವರು ಐದು ಎಕರೆ ಭೂಮಿಯನ್ನು ಮಾತ್ರ ಒತ್ತುವರಿ ಮಾಡಿಕೊಂಡಿದ್ದಾರೆ. ಅದರ ಬಗ್ಗೆ ನಾವು ಕ್ರಮ ತೆಗೆದು ಕೊಂಡು ಆ ಒತ್ತುವರಿಯನ್ನು ಬಿಡಿಸುತ್ತೇವೆ ಮತ್ತು ಭೂಸುಧಾರಣಾ ಕಾನೂನಿನ ಚೌಕಟ್ಟಿಗೆ ಇದು ಕೂಡ ಬರತಕ್ಕದ್ದು ಪಾನ್ತವವಾಗಿದೆ.

ಅಧ್ಯಕ್ಷರು.—ಶ್ರೀ ಬಿ. ಬೈರಪ್ಪಾಜಿಯವರ ಪ್ರಶ್ನೆ ನಂ. 495 ನ್ನು ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್ ಅವರು ಕೇಳಬಹುದು.

Misappropriation of Funds in the State Khadi and Village Industries Board

495 **Sri M. H. JAYAPRKASH NARAYANA** (Sirsi) [On behalf of Sri Byrappaji (Turuvekere)].—

Will the Minister for Industries and Parliamentary Affairs be pleased to state.—

(*a*) the amount misappropriated in the State Khadi and Village Industries Board;

(*b*) whether it has come to the notice of the Government that many Co-operative Societies which were started under the aegis of the Board have closad by misappropriating the funds;

(*c*) if so, the steps taken by the Government to activate them ?